ಶ್ರೀ ಎನ್. ವೈ. ಗೋಪಾಲಕೃಷ್ಣ (ಉಪಾಧ್ಯಕ್ಷರು):– ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ ಅಧ್ಯಕ್ಷನಾದ ನಾನು 2006 – 07 ನೇ ಸಾಲಿನ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು.

(5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(1) ವಿಷಯ :– ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವವರ ಮುಷ್ಕರದ ಕುರಿತು

ಶ್ರೀ ಎನ್. ಎಸ್. ಬೋಸರಾಜು (ಮಾನ್ವಿ) : ಮಾನ್ಯ ಅಧ್ಯಕ್ಷರೆ, ರಾಜ್ಯದ ಗ್ರಾಮೀಣ ಭಾಗದಲ್ಲಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಸುಮಾರು 5,600 ಜನ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ 10 ರಿಂದ 19 ವರ್ಷದಿಂದ ಕೆಲಸ ಮಾಡುತ್ತಿರುವವರು ಇದ್ದಾರೆ. ಅವರಿಗೆ ಇತ್ತೀಚಿನ ದಿನಗಳಲ್ಲಿ ಸರಿಯಾದ ರೀತಿಯಲ್ಲಿ ವೇತನ ಸಿಗುತ್ತಿಲ್ಲ. 1600 ಜನರಿಗೆ ಸುಮಾರು 19 ವರ್ಷಗಳ ದೀರ್ಘ ಅನುಭವವಾಗಿದ್ದರೂ ಸಹ ಅವರಿಗೆ ಪರ್ಮನೆಂಟ್ ಮಾಡಿಲ್ಲ. ಅವರು ಅನೇಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬೆಂಗಳೂರಿನಲ್ಲಿ ಬನ್ನಪ್ಪ ಪಾರ್ಕ್‌ನಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಈಗಾಗಲೇ ಐದನೇ ದಿವಸಕ್ಕೆ ಮುಷ್ಕರ ಕಾಲಿಟ್ಟಿದೆ. ಇಷ್ಟಾದರೂ ಸರ್ಕಾರದ ವತಿಯಿಂದ ಜವಾಬ್ದಾರಿಯುತವಾದ ಮಂತ್ರಿಯಾಗಲಿ, ಅಧಿಕಾರಿಯಾಗಲಿ, ಹೋಗಿ ಅವರ ಜೊತೆಯಲ್ಲಿ ಮಾತನಾಡಿಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವಂಥದ್ದು. ಮೊದಲು ಅವರಿಗೆ 300 ರಿಂದ 400 ರೂಪಾಯಿಗಳು ಕೊಡಲಾಗುತ್ತಿತ್ತು. ಈಗ ಅವರಿಗೆ 750 ರೂಪಾಯಿಯಿಂದ 1,000 ರೂಪಾಯಿ ಮಾತ್ರ ಅವರಿಗೆ ವೇತನ ಸಿಗುತ್ತಿದೆ. ಈ ಕಾಲದಲ್ಲಿ ಆ ವೇತನದಲ್ಲಿ ಬದುಕುವುದಕ್ಕೆ ಅವರಿಗೆ ಎಷ್ಟು ಕಷ್ಟವಾಗುತ್ತದೆ, ಜೊತೆಗೆ ಅವರಿಗೆ ವಯಸ್ಸು ಕೂಡ ಆಗಿದೆ. ಈ ಸಂದರ್ಭದಲ್ಲಿ ಅವರಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಕೆಲವು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಅವರಿಗೆ ಈಗಾಗಲೇ ಸಾಕಷ್ಟು ಅನುಭವವಿದೆ ಮತ್ತು ವಯಸ್ಸು ಕೂಡ ಮೀರಿದೆ. 1,600 ಜನ ಸುಮಾರು 10 ರಿಂದ 19 ವರ್ಷದವರೆಗೆ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಖಾಯಂಗೊಳಿಸಬೇಕು. ಮತ್ತೆ ಅವರಿಗೆ ಯಾವ ಕಾರಣಕ್ಕಾಗಿ ಸಂಬಳವಾಗಿಲ್ಲ? ಅನೇಕ ತಿಂಗಳುಗಳಿಂದ ಸಂಬಳ ಸಿಕ್ಕುತ್ತಿಲ್ಲ ಎನ್ನುವ ಮನವಿಯನ್ನು ಎಲ್ಲಾ ಶಾಸಕರಿಗೆ ಕೊಟ್ಟಿದ್ದಾರೆ. ಆದ್ದರಿಂದ, ಅದನ್ನು ತಕ್ಷಣ ಪರಿಶೀಲಿಸಿ, ಇವತ್ತೇನು ಅಲ್ಲಿ ಮುಷ್ಕರದಲ್ಲಿರುವಂಥವರಿಗೆ ಯಾರಾದರೊಬ್ಬರು ಜವಾಬ್ದಾರಿ ಸ್ಥಾನದಲ್ಲಿರುವ ಮಂತ್ರಿಗಳು ಹೋಗಿ ಅವರ ಜೊತೆಯಲ್ಲಿ ಮಾತನಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ಒತ್ತಾಯಪಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಬೋಸರಾಜುರವರೇನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಮತ್ತು ಅವರು